1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,
ನಂಜನಗೂಡು

**ಸಿ.ಸಿ.ಸಂ:456/2025**

ಪಿರ್ಯಾದಿ ಸರ್ಕಾರದ ಪರಃ ಕವಲಂದೆ ಪೊಲೀಸರು

ವಿರುದ್ಧ

ಆರೋಪಿ ಃ
1 ಚನ್ನಬಸವಣ್ಣ ಬಿನ್ ಮಲ್ಲಣ್ಣ ಡಿ 50 ವರ್ಷ
2 ಶಿವರಾಜು ಬಿನ್ ಚಿಕ್ಕಮಾದಪ್ಪ 51 ವರ್ಷ
3 ಅವಿನಾಶ ಬಿನ್ ಚನ್ನಬಸವಣ್ಣ 19 ವರ್ಷ

ಎಲ್ಲರ ವಾಸಃ ಬದನವಾಳು ಗ್ರಾಮ, ನಂಜನಗೂಡು ತಾಲ್ಲೂಕು

**ದೋಷಾರೋಪಣೆ**

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ:-03.04.2024 ರಂದು ಸಂಜೆ 06-30 ಗಂಟೆ ಸಮಯದಲ್ಲಿ ನಂಜನಗೂಡು ತಾಲೋಕು ಕವಲಂದೆ ಪೊಲೀಸ್ ಠಾಣಾ ಸರಹದ್ದು ಬದನವಾಳು ಗ್ರಾಮದ ಬಸ್ ನಿಲ್ದಾಣದ ಬಳಿ ಚಾಸಾ.1ರವರು ಬಸ್ ನಿಲ್ದಾಣದಿಂದ ತಮ್ಮ ಮನೆಗೆ ನಡೆದುಕೊಂಡು ಹೋಗುತ್ತಿರುವಾಗ 1ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಹಿಂದೆ ಹಿಂದೆ ಬಂದು ನೀನು ಚೆನ್ನಾಗಿದಿಯಾ, ನನಗೆ ಹೆಂಡತಿ ಇಲ್ಲ, ಸತ್ತು ಹೋಗಿದ್ದಾಳೆ ನೀನು ನೋಡಲು ಚೆನ್ನಾಗಿದಿಯಾ ನನ್ನ ಜೊತೆ ಬರುತ್ತಿಯಾ ಚಿನ್ನ ಎಂದು ರೇಗಿಸಿದ್ದು, ಈ ವಿಚಾರವನ್ನು ಚಾಸಾ. 1 ರವರು ತಮ್ಮ ಮನೆಗೆ ಹೋಗಿ ಚಾಸಾ.2 ರವರಿಗೆ ತಿಳಿಸಿದ್ದು, ಈ ವಿಚಾರವನ್ನು

ಕೇಳಲು ಚಾಸಾ.2 ರವರು ಬಂದಾಗ, 1 ರಿಂದ 3 ನೇ ಆರೋಪಿತರಾದ ನೀವು ಚಾಸಾ. 2 ರವರಿಗೆ ಬೋಳಿಮಗನೆ, ಸೂಳೆಮಗನೆ ನಿನ್ನ ಮಗಳನ್ನು ಮನೆಗೆ ಕರೆದುಕೊಂಡು ಹೋಗು ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, 2 ನೇ ಆರೋಪಿತರಾದ ನೀವು ಚಾಸಾ.2 ರವರನ್ನು ತಬ್ಬಿ ಹಿಡಿದುಕೊಂಡು, 1 ನೇ ಆರೋಪಿತರಾದ ನೀವು ಕಲ್ಲಿನಿಂದ ಚಾಸಾ.2 ರವರಿಗೆ ಕಲ್ಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.324 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಜಗಳ ಬಿಡಿಸಲು ಹೋದ ಚಾಸಾ.1 ರವರಿಗೆ 1 ನೇ ಆರೋಪಿತರಾದ ನೀವು ಚಾಸಾ.1 ರವರ

ಜುಟ್ಟನ್ನು ಹಿಡಿದು ಎಳೆದಾಡಿ ಬಟ್ಟೆಯನ್ನು ಹಿಡಿದು ಹರಿದು ಹಾಕಿ ಕೈನಿಂದ ಮೂಗಿಗೆ ಮತ್ತು ಎದೆಗೆ ಕೈನಿಂದ ಗುದ್ದಿ ತೊಡೆಗೆ ಕಾಲಿನಿಂದ ಒದ್ದಿರುತ್ತೀರಿ ಮತ್ತು 3 ನೇ ಆರೋಪಿತರಾದ ನೀವು ಚಾಸಾ.2 ರವರ ಹೊಟ್ಟೆಗೆ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, 1ನೇ ಆರೋಪಿತರಾದ ನೀವು ಚಾಸಾ.1 ರವರನ್ನು ಮಾನಭಂಗ ಮಾಡುವ ಉದ್ದೇಶದಿಂದ ಆಕೆಯ ಬಟ್ಟೆಯನ್ನು ಹಿಡಿದು ಎಳೆದಾಡಿ ಆಕೆಯ ಮೇಲೆ ಹಲ್ಲೆ ಮಾಡಿ ಅಪರಾಧಿಕ ಬಲಪ್ರಯೋಗವನ್ನು ಮಾಡಿರುತ್ತೀರಿ ಮತ್ತು ದಿಃ03.04.2024 ರಂದು 1ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಹಿಂದೆ ಹಿಂದೆ ಬಂದು ನೀನು ಚೆನ್ನಾಗಿದಿಯಾ, ನನಗೆ ಹೆಂಡತಿ ಇಲ್ಲ, ಸತ್ತು ಹೋಗಿದ್ದಾಳೆ ನೀನು ನೋಡಲು ಚೆನ್ನಾಗಿದಿಯಾ ನನ್ನ ಜೊತೆ ಬರುತ್ತಿಯಾ ಚಿನ್ನ ಎಂದು ರೇಗಿಸಿ ಆಕೆಗೆ ಇಷ್ಟವಿಲ್ಲದಿದ್ದರೂ ಆಕೆಗೆ ಮಾನಸಿಕವಾಗಿ ನೋವು ನೀಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.354 ಮತ್ತು 354-ಎ ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಐದನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, 1ನೇ ಆರೋಪಿತರಾದ ನೀವು ಚಾಸಾ.1 ರವರ ಇಚ್ಛೆಗೆ ವಿರುದ್ದವಾಗಿ ಆಕೆಯನ್ನು ದಾರಿಯಲ್ಲಿ ಗೊತ್ತಾಗದಂತೆ ಹಿಂಬಾಲಿಸಿ ಆಕೆಗೆ ಮಾನಸಿಕ ಹಿಂಸೆಯನ್ನು ನೀಡಿರುತ್ತೀರಿ.ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.354-ಡಿ ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, 1ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 17.03.2026 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಃ456/2025**

ಪಿರ್ಯಾದಿ ಸರ್ಕಾರದ ಪರಃ ಕವಲಂದೆ ಪೊಲೀಸರು

ವಿರುದ್ಧ

ಆರೋಪಿ ಃ
1 ಚನ್ನಬಸವಣ್ಣ ಬಿನ್ ಮಲ್ಲಣ್ಣ ಡಿ 50 ವರ್ಷ
2 ಶಿವರಾಜು ಬಿನ್ ಚಿಕ್ಕಮಾದಪ್ಪ 51 ವರ್ಷ
3 ಅವಿನಾಶ ಬಿನ್ ಚನ್ನಬಸವಣ್ಣ 19 ವರ್ಷ
ಎಲ್ಲರ ವಾಸಃ ಬದನವಾಳು ಗ್ರಾಮ, ನಂಜನಗೂಡು ತಾಲ್ಲೂಕು

ಃ ಆಪಾದನೆ ಃ

ಪ್ರಶ್ನೆಃ1- ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ಆರೋಪಿ ಉತ್ತರಃ

ಪ್ರಶ್ನೆಃ2- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ನಂಜನಗೂಡು